ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/ಅ.ಸಂ.ತಿ/83/2024-25

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ: 06-02-2026.

## ಸುತ್ತೋಲೆ

**ವಿಷಯ:** ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ ಅಲ್ಪ ಸಂಖ್ಯಾತ ಕಾಲೇಜು ಎಂದು ಘೋಷಿಸುವ/ನವೀಕರಿಸುವ ಬಗ್ಗೆ.

**ಉಲ್ಲೇಖ:** 1.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/156/ಯು ಪಿ ಸಿ/2013, ದಿನಾಂಕ:30-07-2014.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/46/ಯು ಪಿ ಸಿ/2024, ದಿನಾಂಕ:20-11-2025.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ ಅಲ್ಪ ಸಂಖ್ಯಾತ ಕಾಲೇಜು ಎಂದು ಘೋಷಿಸುವ/ನವೀಕರಿಸುವ ಸಂಬಂಧ ಪ್ರಸ್ತಾವನೆಗಳು ಈ ಕಛೇರಿಯಲ್ಲಿ ಸ್ವೀಕೃತಗೊಳ್ಳುತ್ತಿದ್ದು, ಸದರಿ ಪ್ರಸ್ತಾವನೆಗಳಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ.

1. ಆಯಾ ಕಾಲೇಜುಗಳು ಘೋಷಣೆ/ನವೀಕರಣ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಆಯಾ ವಲಯ ವ್ಯಾಪ್ತಿಗೊಳಪಡುವ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಪರಿಶೀಲಿಸಿ, ಅನುಮೋದನೆಗೊಂಡ ದೃಢೀಕೃತ ಪ್ರಸ್ತಾವನೆಗಳನ್ನು ಸಲ್ಲಿಸದೇ ನೇರವಾಗಿ ಆಡಳಿತ ಮಂಡಳಿಯ/ಪ್ರಾಂಶುಪಾಲರ ಮೂಲಕ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ.
2. ಘೋಷಣೆ/ನವೀಕರಣಕ್ಕೆ ಸಂಬಂಧಿಸಿದ ಉಲ್ಲೇಖಿತ ಸರ್ಕಾರದ ಅಧಿಸೂಚನೆಗಳಲ್ಲಿ ಸೂಚಿಸಿರುವ ಎಲ್ಲಾ ಅಗತ್ಯ ಪೂರಕ ದಾಖಲೆಗಳನ್ನು ಪ್ರಾದೇಶಿಕ ಜಂಟಿ ನಿರ್ದೇಶಕರ ಹಂತದಲ್ಲಿ ಪರಿಶೀಲಿಸಿ, ದೃಢೀಕರಿಸಿ, ಸಲ್ಲಿಸುತ್ತಿಲ್ಲ.

ಆದ್ದರಿಂದ, ಸದರಿ ಅಪೂರ್ಣ ಪ್ರಸ್ತಾವನೆಗಳನ್ನು ಇಲಾಖಾ ಹಂತದಲ್ಲಿ ಪರಿಶೀಲಿಸಿ, ಅವಶ್ಯಕ ದಾಖಲಾತಿಗಳನ್ನು ಕೋರಿ ಹಲವಾರು ಬಾರಿ ಪತ್ರವ್ಯವಹಾರ ಮಾಡಬೇಕಾಗುತ್ತಿರುವುದರಿಂದ, ಉಲ್ಲೇಖ(1) & (2)ರ ಸರ್ಕಾರದ ಆದೇಶಗಳನ್ವಯ ಪ್ರಸ್ತಾವನೆಗಳನ್ನು ಸಲ್ಲಿಸುವ ಪೂರ್ವದಲ್ಲಿ ಕಾಲೇಜು ತಮ್ಮ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳ ಹಂತದಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ, ಅನ್ವಯವಾಗುವ ಎಲ್ಲಾ ಅಗತ್ಯ ದೃಢೀಕೃತ ದಾಖಲೆಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

| ಕ್ರ. ಸಂ | ವಿವರ |
|---|---|
| 1 | ನಮೂನೆ-ಎ & ಬಿ ಯಲ್ಲಿರುವಂತೆ ದೃಢೀಕೃತ ಆದೇಶಗಳು/ದಾಖಲೆಗಳು |
| 2 | ಪ್ರಸ್ತಾವನೆಯಲ್ಲಿನ ಎಲ್ಲ ದಾಖಲೆಗಳನ್ನು ಪ್ರತ್ಯೇಕವಾಗಿ ವಿಂಗಡಿಸಿದ 02 ಪ್ರತಿಗಳು. ( 02-Sets) |
| 3 | ಪ್ರಸ್ತಾವನೆಯಲ್ಲಿರುವ ಎಲ್ಲ ದೃಢೀಕೃತ ದಾಖಲೆಗಳ ಪುಟ ಸಂಖ್ಯೆಗಳನ್ನು ನಮೂದಿಸಿರುವ ಕ್ರಮಬದ್ಧವಾದ ಚೆಕ್ ಲಿಸ್ಟ್. |
| 4 | ಕಾಲೇಜು ಪ್ರಾರಂಭವಾದ ಆದೇಶದ ಪ್ರತಿ. |
| 5 | ಕಾಲೇಜನ್ನು ಖಾಸಗಿ ಅನುದಾನಿತ ಕಾಲೇಜು ಎಂದು ಘೋಷಿಸಿರುವ (Grant-in-Aid) ಆದೇಶದ ಪ್ರತಿ |

| | |
|---|---|
| 6 | ಕಾಲೇಜಿನಲ್ಲಿ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಿಗೆ ಸೀಮಿತವಾಗಿರುವ ನಿವೇಶನ/ಕೊಠಡಿಗಳ ವಿವರ. |
| 7 | ಶಾಶ್ವತ ಸಂಯೋಜನೆಯ ಆದೇಶದ ಪ್ರತಿ. |
| 8 | ಮಂಜೂರಾತಿಯಾಗಿರುವ ಕೋರ್ಸ್‌ಗಳ ವಿವರ. |
| 9 | ಪ್ರಸ್ತುತ ಚಾಲ್ತಿಯಲ್ಲಿರುವ ಪದವಿ/ಸ್ನಾತಕೋತ್ತರ/ಇತರೆ ಕೋರ್ಸ್‌ಗಳ ವಿವರ ಹಾಗೂ ಸದರಿ ಕೋರ್ಸುಗಳಿಗೆ ಪ್ರಸಕ್ತ ಸಾಲಿಗೆ ಸಂಯೋಜನೆ ಪಡೆದಿರುವ ಮಂಜೂರಾತಿ ಆದೇಶದ ಪ್ರತಿ. |
| 10 | ನ್ಯಾಕ್ ಮಾನ್ಯತೆ ಪಡೆದಿದ್ದಲ್ಲಿ ಆದೇಶದ ಪ್ರತಿ/ಮಾನ್ಯತೆ ನವೀಕರಣ ಆದೇಶದ ಪ್ರತಿ. |
| 11 | ಯು.ಜಿ.ಸಿ 2-ಎಫ್ & 12-ಬಿ ಮಾನ್ಯತೆ ಪಡೆದಿದ್ದಲ್ಲಿ ತತ್ಸಂಬಂಧ ಆದೇಶದ ಪ್ರತಿ. |
| 12 | ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಯು ಕರ್ನಾಟಕ ಶಿಕ್ಷಣ ಕಾಯ್ದೆ/ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯ್ದೆ 1950/ ಕರ್ನಾಟಕ ಸೊಸೈಟಿ ರಿಜಿಸ್ಟ್ರೇಶನ್ ಕಾಯ್ದೆ 1960 ಅಡಿಯಲ್ಲಿ ನೊಂದಣಿಯಾಗಿರುವ ಆದೇಶದ ಪ್ರತಿ. |
| 13 | ಪ್ರಸ್ತುತ ಆರ್ಥಿಕ ಸಾಲಿಗೆ ನೊಂದಣಿ ನವೀಕರಣವಾಗಿರುವ ಬಗ್ಗೆ ದಾಖಲೆಯ ಪ್ರತಿ. |
| 14 | ಸದರಿ ಶಿಕ್ಷಣ ಸಂಸ್ಥೆಯಿಂದ ನಡೆಸಲಾಗುತ್ತಿರುವ ಇತರೇ ಶಿಕ್ಷಣ ಸಂಸ್ಥೆಗಳ ಪಟ್ಟಿ. |
| 15 | ಕಳೆದ 03 ಶೈಕ್ಷಣಿಕ ಸಾಲುಗಳ ಶೇಕಡಾವಾರು ವಿದ್ಯಾರ್ಥಿಗಳ ದಾಖಲಾತಿ ವಿವರ. (ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಸಲ್ಲಿಸುವುದು) |
| 16 | ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/46/ಯುಪಿಸಿ/2024, ದಿನಾಂಕ:20.11.2025ರನ್ವಯ **ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ನಿಯಮಗಳು ಮತ್ತು ಷರತ್ತುಗಳ ಗುರುತಿಸುವಿಕೆ) (ಕಾಲೇಜು ಶಿಕ್ಷಣ) ನಿಯಮಗಳು, 2014 ರಲ್ಲಿ, ನಿಯಮ 4ರ ಉಪ ನಿಯಮ(6)ರಲ್ಲಿ ಈ ಕೆಳಗಿನಂತೆ ಬದಲಾವಣೆ ಮಾಡಿ ಆದೇಶಿಸಲಾಗಿರುತ್ತದೆ.**<br><br>**"ಮುಸ್ಲಿಂ ಅಲ್ಪಸಂಖ್ಯಾತ ಧಾರ್ಮಿಕ ಸಂಸ್ಥೆಗಳ ಸಂದರ್ಭದಲ್ಲಿ ಮಾತ್ರ, ಸದರಿ ಸಂಸ್ಥೆಯಲ್ಲಿ ದಾಖಲಾದ ಮಕ್ಕಳಲ್ಲಿ ಐವತ್ತು ಪ್ರತಿಶತಕ್ಕಿಂತ ಕಡಿಮೆಯಿಲ್ಲದ ಮಕ್ಕಳು ಸದರಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. ಆದರೆ, ಈ ಷರತ್ತು ಇತರ ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ."**<br><br>ಅದರಂತೆ, **ಮುಸ್ಲಿಂ ಅಲ್ಪ ಸಂಖ್ಯಾತ ಸಂಸ್ಥೆಗಳು** ಕಾಲೇಜನ್ನು ಘೋಷಣೆ/ನವೀಕರಣ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಕಡ್ಡಾಯವಾಗಿ ಸದರಿ ಷರತ್ತನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. |
| 17 | ಕಳೆದ 03 ಶೈಕ್ಷಣಿಕ ಸಾಲುಗಳ ಶೇಕಡಾವಾರು ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶದ ವಿವರ (ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಸಲ್ಲಿಸುವುದು) |
| 18 | ಕಾಲೇಜಿನ ಆಡಳಿತ ಮಂಡಳಿಯಲ್ಲಿ ಪ್ರಸ್ತುತ ಇರುವ ಸದಸ್ಯರ ಪಟ್ಟಿ. ಸಂಘದಲ್ಲಿರುವ ಸಂಬಂಧಪಟ್ಟ ಮತೀಯ/ಭಾಷಾ ಸದಸ್ಯರ ಸಂಖ್ಯೆ ಮತ್ತು ಪ್ರತಿಯೊಬ್ಬ ಸದಸ್ಯರ ಜಾತಿ/ಭಾಷಾ ಪ್ರಮಾಣ ಪತ್ರದ ದಾಖಲೆಗಳು. |
| 19 | ಪ್ರಸ್ತುತ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಿವರ.(Aided/Unaided/Minorities & Subject Wise) |
| 20 | ಗ್ರಂಥಾಲಯದ ವಿವರ. |
| 21 | ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆ ಎಂದು ಘೋಷಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ರೂ.10.000/- ಗಳ ಕೆ-2 ಚಲನ್ ಅಥವಾ D.D.ಯನ್ನು ತ್ರಿಸದಸ್ಯರ ಸಮಿತಿಯು ಪರಿಶೀಲನೆಗೆ ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು. |
| 22 | ರೂ.500/- ಗಳ ನಾನ್ ಜ್ಯೂಡಿಷಿಯಲ್ ಕೋರ್ಟ್ ಫೀಸ್ ಸ್ಟ್ಯಾಂಪ್. |
| 23 | ರೂ.200/- ಗಳ ನಾನ್ ಜ್ಯೂಡಿಷಿಯಲ್ ಕೋರ್ಟ್ ಫೀಸ್ ಸ್ಟ್ಯಾಂಪ್. |
| 24 | Population of the area where institution is located and percentage of minority population. |

ಅಡಕ: ಅನುಬಂಧ-1, 2 ಮತ್ತು 3.

Magrulin

**ಆಯುಕ್ತರು**

**ಕಾಲೇಜು ಮತ್ತು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ
2. ಎಲ್ಲಾ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಛೇರಿ ಪ್ರತಿ.